## ಪಾಠ 22

## ಸಭೆ:

# ಅದರ ಭೋಜನ

**ಅದು ಏನೆಂದು ಕರೆಯಲ್ಪಟ್ಟಿದೆ ಮತ್ತು ಯಾಕೆ**

1. **ಅದು ಒಂದು ಭೋಜನ ಎಂದು ಯಾಕೆ ಕರೆಯಲ್ಪಟ್ಟಿದೆ (1 ಕೊರಿಂಥ 11:20, 23)?**
2. **ಅದು ಯಾರ ಭೋಜನವಾಗಿದೆ (1 ಕೊರಿಂಥ 11:20)?**
3. **ಪೌಲನಿಂದ ಅದು ಏನೆಂದು ಕರೆಯಲ್ಪಟ್ಟಿದೆ (1 ಕೊರಿಂಥ 10:21)?**
4. **ಅದು ಯಾಕೆ "ಪಾಲುಗಾರರಾಗುವುದು" (**communion**) ಎಂದು ಕರೆಯಲ್ಪಟ್ಟಿದೆ (1 ಕೊರಿಂಥ 10:16)?**
5. **ಲೂಕನು ಅದನ್ನು ಏನೆಂದು ಕರೆದಿದ್ದಾನೆ (ಅಪೊಸ್ತಲರ ಕೃತ್ಯಗಳು 20:7)?**
   a. ಅದನ್ನು "ಯೂಖರಿಸ್ಟ್" ಎಂದು ಯಾಕೆ ಕರೆಯಬಾರದು (2 ತಿಮೊಥೆ 1:13)?
   b. ಅದನ್ನು "ಸಾಕ್ರಾಮೆಂಟ್" ಎಂದು ಯಾಕೆ ಕರೆಯಬಾರದು (ತೀತ 2:1, 7, 8)?

**ಅದು ದೈವಿಕ ಸ್ಥಾಪನೆ ಯಾಕೆ ಆಗಿದೆ**

1. **ಅದನ್ನು ಯಾರು ಸ್ಥಾಪಿಸಿದರು (ಮತ್ತಾಯ 26:26-29)?**
2. **ಅದರ ಬಗ್ಗೆ ಪೌಲನು ತನ್ನ ಬೋಧನೆಯನ್ನು ಯಾರಿಂದ ಪಡೆದನು (1 ಕೊರಿಂಥ 11:23)?**
3. **ಅದು ಎಲ್ಲಿ ಆಚರಿಸಲ್ಪಟ್ಟಿತು (ಲೂಕ 22:29, 30; 1 ಕೊರಿಂಥ 11:18, 22)?**

**ಅದರ ಮೂಲವಸ್ತುಗಳು**

1. **ಯೇಸುವು ಭೋಜನವನ್ನು ಸ್ಥಾಪಿಸಿದಾಗ ಏನನ್ನು ಆಶೀರ್ವದಿಸಿದನು (ಮತ್ತಾಯ 26:26; ಮಾರ್ಕ 14:22)?**
   a. ರೊಟ್ಟಿಯನ್ನು "ಆಶೀರ್ವದಿಸುವದರಲ್ಲಿ" ಆತನು ಏನು ಮಾಡಿದನು (ಲೂಕ 22:19; 1 ಕೊರಿಂಥ 11:23, 24)?
   b. ಯಾವ ವಿಧದ ರೊಟ್ಟಿ ಅದಾಗಿತ್ತು (1 ಕೊರಿಂಥ 5:8)?
   c. ಪೌಲನು ಅದನ್ನು ಏನೆಂದು ಕರೆದನು (1 ಕೊರಿಂಥ 11:24)? ಅದು ಯಾವುದರ ಗುರುತಾಗಿದೆ?
2. **ಇನ್ನೊಂದು ವಸ್ತುವನ್ನು ಯಾವ ಮಾತಿನಿಂದ ಯೇಸು ಮುಂದಿಟ್ಟನು (ಮತ್ತಾಯ 26:27, 29)?**
   a. "ಪಾತ್ರೆ," "ದ್ರಾಕ್ಷಾರಸ" ಯಾವುದಾಗಿತ್ತು (ಮತ್ತಾಯ 26:28)? ಅದು ಯಾರ "ಪಾತ್ರೆ" ಆಗಿತ್ತು (1 ಕೊರಿಂಥ 10:21)?
   b. ಆದುದರಿಂದ, ಅದು ಯಾವುದರ ಗುರುತಾಗಿತ್ತು (1 ಕೊರಿಂಥ 11:25)?
      (1) ಕಥೋಲಿಕ್ ಪ್ರೀಸ್ಟನು ರೊಟ್ಟಿಯನ್ನು ಆಶೀರ್ವದಿಸುವಾಗ ಅವನು ಏನು ಹೇಳುತ್ತಾನೆ?

(2) ಅವನು ಪಾತ್ರೆಯನ್ನು ಆಶೀರ್ವದಿಸುವಾಗ ಏನೆಂದು ಹೇಳುತ್ತಾನೆ?

**ಅದು ಯಾವಾಗ ಆಚರಿಸಲ್ಪಡಬೇಕು**

1. **ಪೌಲನ ಸರ್ವಸಾಮಾನ್ಯ ಹೇಳಿಕೆಯನ್ನು ಕೊಡಿರಿ (1 ಕೊರಿಂಥ 11:26).**
2. **ಅದನ್ನು ಆಚರಿಸುವದರಲ್ಲಿ ಪ್ರಥಮ ಸಭೆಯ ಕ್ರಮ ಯಾವುದಾಗಿತ್ತು (ಅಪೊಸ್ತಲರ ಕೃತ್ಯಗಳು 2:42)?**
3. **ರೊಟ್ಟಿ ಮುರಿಯಲು ಆದಿ ಶಿಷ್ಯರು ಯಾವಾಗ ಕೂಡಿ ಬರುತ್ತಿದ್ದರು (ಅಪೊಸ್ತಲರ ಕೃತ್ಯಗಳು 20:7)?**
4. **ಇಬ್ರಿಯ ಕ್ರೈಸ್ತರು *ಹೇಗೆ* ಬೋಧಿಸಲ್ಪಟ್ಟಿದ್ದಾರೆ (ಇಬ್ರಿಯ 10:24, 25)?**
   a. "ಪ್ರತೀವಾರದ ಮೊದಲನೆಯ ದಿನ" ಎಂದು ಹೇಳುವುದು ಅಗತ್ಯವಾಗಿದೆಯೋ? "ಪ್ರತಿ ಸಬ್ಬತ್ತನ್ನು ಕೈಕೊಳ್ಳಿರಿ" ಎಂದು ಧರ್ಮಶಾಸ್ತ್ರವು ಹೇಳಿತೋ (ವಿಮೋಚನಕಾಂಡ 20:8)?
   b. ಯಾವ ಸ್ಮರಣಾರ್ಥ ಸ್ಥಾಪಣೆಗೆ ಅದರ ಆಚರಣೆಗೆ ನಿಯಮಿತ ಸಮಯವಿರುವದಿಲ್ಲ?
   c. ಮಾಸಿಕ, ತ್ರೈಮಾಸಿಕ, ಮತ್ತು ವಾರ್ಷಿಕ ಆಚರಣೆಗೆ ಯಾವುದೇ ಅಧಿಕಾರ ಎಲ್ಲಿದೆ?

**ಯಾರು ಪಾಲು ತೆಗೆದುಕೊಳ್ಳಬೇಕು**

1. **ಭೋಜನವು ಸ್ಥಾಪಿಸಲ್ಪಟ್ಟಾಗ ಯಾರು ಪಾಲು ತೆಗೆದುಕೊಳ್ಳಬೇಕೆಂದು ಹೇಳಲ್ಪಟ್ಟಿತು (ಮತ್ತಾಯ 26:27)?**
2. **ಮೊದಲನೆಯ ಸಭೆಯ ಎಷ್ಟು ಜನ ಸದಸ್ಯರು ಅದರಲ್ಲಿ ಪಾಲುತೆಗೆದುಕೊಂಡರು (ಅಪೊಸ್ತಲರ ಕೃತ್ಯಗಳು 2:41, 42)?**
3. **ಪ್ರತಿಯೊಬ್ಬ ವ್ಯಕ್ತಿಯು ಏನು ಮಾಡಬೇಕು (1 ಕೊರಿಂಥ 11:28)?**
4. **ಒಂದು ದೇಹದಿಂದ ಎಷ್ಟು ಜನರು ಪ್ರತಿನಿಧೀಕರಿಸಲ್ಪಟ್ಟಿದ್ದಾರೆ (1 ಕೊರಿಂಥ 10:17; 12:20)?**
   a. "Closed Communion" ಗಾಗಿ ಪರಿಶುದ್ಧ ಬರಹದಲ್ಲಿ ಎಲ್ಲಿದೆ? "Open Communion" ಗಾಗಿ ಪರಿಶುದ್ಧ ಬರಹದಲ್ಲಿ ಎಲ್ಲಿದೆ?
   b. ಎಷ್ಟು "open" ಮತ್ತು "closed" ಕಮ್ಯುನಿಯನ್ ಇರಬೇಕು (1 ಕೊರಿಂಥ 10:17; 12:20)?

**ಹೇಗೆ ಮತ್ತು ಯಾಕೆ ಅದು ಆಚರಿಸಲ್ಪಡಬೇಕು**

1. **ರೊಟ್ಟಿಯನ್ನು ಹಂಚುವ ಮೊದಲು, ಯೇಸು ಏನು ಮಾಡಿದನು (ಮತ್ತಾಯ 26:26)? "ಅದನ್ನು ಆಶೀರ್ವದಿಸುವದರಲ್ಲಿ" ಆತನು ಏನು ಮಾಡಿದನು (ಲೂಕ 22:19)? ಶಿಷ್ಯರಿಗೆ ಪಾತ್ರೆಯನ್ನು ಕೊಡುವ ಮೊದಲು, ಆತನು ಏನು ಮಾಡಿದನು (ಮತ್ತಾಯ 26:27)?**
2. **ಪ್ರತಿಯೊಬ್ಬರು ಯಾರ ಜ್ಞಾಪಕಾರ್ಥವಾಗಿ ತಿಂದು ಕುಡಿಯಬೇಕು (1 ಕೊರಿಂಥ 11:24, 25)?**
3. **ಭಾಗವಹಿಸುವಾಗ, ಯಾರೊಂದಿಗೆ ಪಾಲುಗಾರರಾಗುತ್ತೇವೆ (1 ಕೊರಿಂಥ 10:16)?**
4. **ಇದನ್ನು ಆಚರಿಸುವದರಲ್ಲಿ ಏನು ಪ್ರಸಿದ್ಧಿಪಡಿಸಲ್ಪಡುತ್ತದೆ (1 ಕೊರಿಂಥ 11:26)?**
5. **ಕರ್ತನ ಭೋಜನದಲ್ಲಿ ಪಾಲುಗಾರಾಗುವ ಮೊದಲು ಪ್ರತಿಯೊಬ್ಬನು ಏನು ಮಾಡಬೇಕು (1 ಕೊರಿಂಥ 11:28)?**
6. **ಪ್ರತಿಯೊಬ್ಬನು ಕರ್ತನೊಂದಿಗೆ ಹೇಗೆ ಭೋಜನದಲ್ಲಿ ಭಾಗವಹಿಸಬೇಕು (1 ಕೊರಿಂಥ 11:27)?**

a. ಯಾವ ಗಂಭೀರತೆಯು ಭೋಜನದ ಗುಣಲಕ್ಷಣವಾಗಿದೆ?
b. ಭೋಜನದಲ್ಲಿ ಪಾಲುಗಾರರಾಗುವದರಲ್ಲಿ ಕಿವಿಗಳು, ಕಣ್ಣುಗಳು, ಕೈಗಳು, ಬಾಯಿ, ದೇಹ, ಬುದ್ಧಿ ಮತ್ತು ಮನಸಾಕ್ಷಿ ಹೇಗೆ ಒಳಗೊಂಡಿರುತ್ತವೆ ಎಂಬುದನ್ನು ತೋರಿಸಿರಿ.

© 2009 Truth for Today